ಸೃಜನಿ

SRUJANI: Indian Journal of Innovative Research and Development (SIJIRD)
Volume-5 Issue 1, March-April 2026, Pp. 106-111
Bi-Monthly, Peer-Reviewed, Open Access, Indexed Journal

I S S N: 2583-3510
SIRDF JOURNALS
editor@srujani.in
www.srujani.in

# ಭಾರತದಲ್ಲಿನ ತೃತೀಯ ಲಿಂಗೀಯರ ಸ್ಥಾನಮಾನ : ಸಮಾಜಶಾಸ್ತ್ರೀಯ ಅವಲೋಕನ

**ಡಾ.ಸಂಗನಗೌಡ ಶಿವನಗೌಡ**
ಸಹ ಪ್ರಾಧ್ಯಾಪಕರು, ಸರಕಾರಿ ಪ್ರಥಮ ದರ್ಜೆ ಕಾಲೇಜು, ಲಿಂಗಸುಗೂರು

***Abstract:***
*ಭಾರತದಲ್ಲಿನ ಅಂಚೀಕರಣಗೊಂಡ ಸಮೂಹಗಳ ಬಗ್ಗೆ ಪ್ರಸ್ತಾಪಿಸುವಾಗ ಇತ್ತೀಚಿನ ದಿನಗಳಲ್ಲಿ ನಮ್ಮ ಗಮನ ಸೆಳೆಯುವ ಇನ್ನೊಂದು ಸಮೂಹವೇ ತೃತೀಯ ಲಿಂಗೀಯರ ಸಮೂಹ. ಸ್ವಾತಂತ್ರ್ಯ ಬಂದ ನಂತರದಿಂದ ಹಾಗೂ ಅದಕ್ಕೂ ಮುಂಚಿನಿಂದ ಎಲ್ಲರ ಗಮನದಲ್ಲಿರುವ ಅಂಚಿನ ಸಮೂಹಗಳಾದ ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡ ಹಾಗೂ ಹಿಂದುಳಿದ ವರ್ಗಗಳಂತಲ್ಲದೆ 21ನೇ ಶತಮಾನದ ಆರಂಭದಿಂದ ಹೆಚ್ಚು ಬೆಳಕಿಗೆ ಬರುತ್ತಿರುವ ಹಾಗೂ ಶೈಕ್ಷಣಿಕ ವಲಯದಲ್ಲಿಯೂ ಚರ್ಚಿತವಾಗುತ್ತಿರುವ ಸಮೂಹವೇ ತೃತೀಯ ಲಿಂಗೀಯರ ಸಮೂಹವಾಗಿದೆ. ಪ್ರಸ್ತುತ ಲೇಖನದಲ್ಲಿ ಭಾರತದ ಲಿಂಗೀಯರ ಸ್ಥಾನಮಾನ ಕುರಿತು ಸಮಾಜಶಾಸ್ತ್ರೀಯ ದೃಷ್ಟಿಕೋನದಿಂದ ಚರ್ಚಿಸಲಾಗಿದೆ.*

***Keywords:*** *ಭಾರತೀಯ ಸಮಾಜ, ಅಂಚಿನ ಸಮುದಾಯ, ತೃತೀಯ ಲಿಂಗೀಯರು, ಕೋಥಿ, ಮಂಗಳಮುಖಿ*

## ಪೀಠಿಕೆ

ತೃತೀಯ ಲಿಂಗೀಯರು ಎಂಬ ಪರಿಕಲ್ಪನೆ ಹುಟ್ಟುಹಾಕಿದ್ದೆ ಇತ್ತೀಚಿಗೆ, ಈ ಸಮೂಹವು ಗ್ರಾಮೀಣ ಪ್ರದೇಶಗಿಂತಲೂ ನಗರ ಪ್ರದೇಶಗಳಲ್ಲಿ ಹೆಚ್ಚಾಗಿ ಕಾಣಬರುತ್ತಾರೆ. ಬಹುತೇಕ ತೃತೀಯ ಲಿಂಗಿಗಳು ಗಂಡಾಗಿ ಹುಟ್ಟಿ ಹೆಣ್ಣಿನ ಸಂವೇದನೆಗಳನ್ನು ಹೊಂದಿರುವವರು. ತಾನು ಅತ್ತ ಗಂಡು ಅಲ್ಲ, ಇತ್ತ ಹೆಣ್ಣು ಅಲ್ಲ ಅನ್ನುವುದು ಸಂಪೂರ್ಣವಾಗಿ ಅರ್ಥವಾಗುವರೆಗೆ ಕುಟುಂಬ, ಸಮಾಜ ಅವರನ್ನು ದೂರ ಮಾಡಿರುತ್ತದೆ. ಆದರೆ ಈ ಸಮೂಹ ಸಮಾಜದಿಂದ ಬಹಳಷ್ಟು ತಿರಸ್ಕಾರಕ್ಕೆ, ಅವಕೃಪಗೆ, ಅಪಹಾಸ್ಯಕ್ಕೆ ಗುರಿಯಾಗಿದೆ ಅಲ್ಲದೆ ಸಾಮಾಜಿಕವಾಗಿ, ಆರ್ಥಿಕವಾಗಿ, ಸಾಂಸ್ಕೃತಿಕವಾಗಿ ಇವರನ್ನು ಹೊರಗಿಟ್ಟಿದ್ದಾರೆ.

ತೃತೀಯ ಲಿಂಗಿಗಳಿಗೆ ಪ್ರಾದೇಶಿಕವಾಗಿ ಹಲವಾರು ಬಗೆಯ ಹೆಸರುಗಳನ್ನು ಕರೆಯಲಾಗುತ್ತದೆ. ಚಕ್ಕ, ಹಿಜಡ, ಮಂಗಳಮುಖಿ, ಒಂಬತ್ತು, ಜೋಗಮ್ಮ ಹೀಗೆ ಹಲವಾರು ಹೆಸರುಗಳಿಂದ ಕರೆಯಿಸಿಕೊಳ್ಳುತ್ತಾರೆ. ಇವರು ತಮ್ಮ ಕುಟುಂಬದಿಂದ ದೂರವಾಗುತ್ತಾರೆ. ಇನ್ನು ಕೆಲವರು ತಮ್ಮ ಕುಟುಂಬದಲ್ಲಿ ವಾಸಿಸುತ್ತಾರೆ. ಇನ್ನು ಕೆಲವು ಮಂಗಳಮುಖಿಯರು ತೃತೀಯ ಲಿಂಗಿಗಳೆಲ್ಲರು ಸೇರಿ ಒಂದು ಕಡೆ ನೆಲೆಸುತ್ತಾರೆ. ಇತ್ತೀಚೆಗೆ ಅವರಿಗೆ ಕೇಂದ್ರ ಮತ್ತು ರಾಜ್ಯ ಸರಕಾರದ ಹಲವಾರು ಸೌಲಭ್ಯಗಳಿದ್ದರೂ ಸಹಿತ ಅವರಿಗೆ ಇನ್ನು ಸೌಲಭ್ಯಗಳು ತಲುಪುತ್ತಿಲ್ಲ ಎಂದು ತಿಳಿದು ಬಂದಿದೆ.

ತೃತೀಯ ಲಿಂಗಿಗಳು ತಮ್ಮ ಜೀವನಮಟ್ಟ ಸುಧಾರಿಸಿಕೊಳ್ಳಲು ಆರ್ಥಿಕವಾಗಿ ಸುಧಾರಿಸಿಕೊಳ್ಳಲು

***Please cite this article as:*** ಸಂಗನಗೌಡ ಶಿವನಗೌಡ. (2026). ಭಾರತದಲ್ಲಿನ ತೃತೀಯ ಲಿಂಗೀಯರ ಸ್ಥಾನಮಾನ : ಸಮಾಜಶಾಸ್ತ್ರೀಯ ಅವಲೋಕನ. *ಸೃಜನಿ: ಇಂಡಿಯನ್ ಜರ್ನಲ್ ಆಫ್ ಇನ್ನೋವೇಟಿವ್ ರಿಸರ್ಚ್ ಅಂಡ್ ಡೆವೆಲಪ್‌ಮೆಂಟ್*, 5(1), 106–111

ಕೂಲಿ, ವ್ಯಾಪಾರ, ವೇಶ್ಯವಾಟಿಕೆ, ಭಿಕ್ಷಾಟನೆ, ರಂಗಭೂಮಿ, ಇತ್ತೀಚೆಗೆ ಸರ್ಕಾರಿ ನೌಕರಿ ಮುಂತಾದ ಕ್ಷೇತ್ರಗಳಲ್ಲಿ ತೊಡಗಿರುತ್ತಾರೆ.

**ಪ್ರಾಚೀನ ಕಾಲದಲ್ಲಿ ತೃತೀಯ ಲಿಂಗಿಗಳು**

ಗಂಡು ಹೆಣ್ಣಿನ ನಡುವಿನ ಲೈಂಗಿಕ ಆಕರ್ಷಣೆ ಅನಾದಿ ಕಾಲದಿಂದಲೂ ಅಸ್ತಿತ್ವದಲ್ಲಿರುವ ಪ್ರಬಲವಾದ ಪ್ರಕ್ರಿಯೆ. ಒಂದು ಪ್ರಾಚೀನ ಕಥೆಯ ಪ್ರಕಾರ ಮೊದಲಿಗೆ ಗಂಡೂ ಅಲ್ಲದ, ಹೆಣ್ಣೂ ಅಲ್ಲದ ಮಾನವ ಜೀವಿಯೊಂದು ಇತ್ತಂತೆ. ಒಂದು ದಿನ ಆ ಜೀವಿಯು ಇದ್ದಕ್ಕಿದ್ದ ಹಾಗೆ ಎರಡು ಭಾಗವಾಗಿ ಒಂದು ಗಂಡಾಗಿಯೂ ಇನ್ನೊಂದು ಹೆಣ್ಣಾಗಿಯೂ ಜೀವ ಪಡೆದು ಹೋಗಿತ್ತಂತೆ. ಅಂದಿನಿಂದ ಈ ಎರಡೂ ಭಾಗಗಳು ಒಂದಾಗಲು ನಿರಂತರವಾಗಿ ಪ್ರಯತ್ನಿಸುತ್ತಿದೆಯಂತೆ. ಈ ಆಕರ್ಷಣೆಯನ್ನು ತಡೆಯಲು ಸಾಧ್ಯವಿಲ್ಲ. ತಡೆದಷ್ಟೂ ಅದು ಉಲ್ಬಣಗೊಳ್ಳುತ್ತಲೇ ಹೋಗುತ್ತದೆ.

ಹೀಗೆ ಪ್ರಾಚೀನ ಕಾಲದಿಂದಲೂ ಸಲಿಂಗ ರತಿಯ ಉಲ್ಲೇಖಗಳು ಜಗತ್ತಿನ ಎಲ್ಲಾ ಸಂಸ್ಕೃತಿಗಳಲ್ಲೂ, ಕಾಲಘಟ್ಟಗಳಲ್ಲೂ ಇದ್ದಿರಬಹುದಾದ ನಿದರ್ಶನಗಳಿವೆ. ಅಮೇರಿಕ, ಆಫ್ರಿಕಾ, ಗ್ರೀಸ್, ರೋಮ್, ರಷ್ಯಾ, ಈಜಿಪ್ಟ, ಜಪಾನ್ ಮುಂತಾದ ದೇಶಗಳಲ್ಲಿ ಸಲಿಂಗ ರತಿಯ ಪ್ರತಿಮೆಗಳು, ಚಿತ್ರಗಳು ವಾಸ್ತುಶಿಲ್ಪಗಳು ಕಾಣಸಿಗುತ್ತವೆ.

ಪಿಂಗಾಣಿ ಪಾತ್ರೆಗಳಲ್ಲಿ, ಕಲ್ಲಿನ ಬಂಡೆಗಳಲ್ಲಿ ದೇವಸ್ಥಾನದ ಗೋಡೆಗಳಲ್ಲಿ ಲೈಂಗಿಕ ಕ್ರಿಯೆಯಲ್ಲಿ ತೊಡಗಿರುವುದರ ಚಿತ್ರ ಸಂಕೇತಗಳಿವೆ. ವಾತ್ಸಾಯನ ಕಾಮಸೂತ್ರದಲ್ಲಿಯೂ ಹಲವು ಇಂಥಹ ವಿಶಿಷ್ಟವಾದ ಚಿತ್ರಗಳಿವೆ.

**ವರ್ತಮಾನ ಕಾಲದಲ್ಲಿ ತೃತೀಯ ಲಿಂಗಿಗಳು :**

ವರ್ತಮಾನದಲ್ಲಿ ತೃತೀಯ ಲಿಂಗಿಗಳ ಪರಿಸ್ಥಿತಿ ನಿಜಕ್ಕೂ ಅವಮಾನೀಯವಾಗಿದೆ. ಏಕೆಂದರೆ ತೃತೀಯ ಲಿಂಗಿಗಳಿಗೆ ತಮ್ಮ ಕುಟುಂಬದಲ್ಲಿಯೇ ಗೌರವ ಸಿಗದಂತಾಗಿದೆ. ಹೆಣ್ಣು ಅಲ್ಲದ, ಗಂಡು ಅಲ್ಲದ ಮಕ್ಕಳ ಬಗ್ಗೆ ಕುಟುಂಬ ಬಹಳಷ್ಟು ಅವಮಾನ ಅನುಭವಿಸುತ್ತದೆ. ಇದರಿಂದಾಗಿ ಸ್ವತಃ ಅಣ್ಣ ತಮ್ಮಂದಿರೇ ಇಂತಹವರನ್ನು ಕುಟುಂಬದ ಒಳಗೆ ಸೇರಿಸಿಕೊಳ್ಳುವುದು ಅವರನ್ನು ಸೇರದೆ ಇರುವುದು ಬಹಳ ದು:ಖದ ಸಂಗತಿಯಾಗಿದೆ. ಹಾಗೇಯೆ ಸಮಾಜ ಕೂಡ ತೃತೀಯ ಲಿಂಗಿಗಳಿಗೆ ನೆರವಿಗೆ ಬರುತ್ತಿಲ್ಲ. ಸಮಾಜದ ಜನರು ಕೂಡ ತೃತೀಯ ಲಿಂಗಿಗಳ ದೈಹಿಕ ರಚನೆ ಬಗ್ಗೆ ಹಾಸ್ಯ ಮಾಡುವುದು, ನಗುವುದು ಅವರನ್ನು ನೋಡಿ ಅವಹೇಳನಕಾರಿ ಮಾತುಗಳನ್ನು ಆಡುವುದು ಪ್ರತಿ ದಿನ ಕಂಡುಬರುತ್ತದೆ.

ಗ್ರಾಮೀಣ ಸಮಾಜದಲ್ಲಿ ತೃತೀಯ ಲಿಂಗಿಗಳಿಗೆ ಸಭೆ ಸಮಾರಂಭ ಮಾಡುವಾಗ ಅವರನ್ನು ಕರೆದು ಮೊದಲ ಆದ್ಯತೆ ನೀಡಿ ಗೌರವಿಸುತ್ತಾರೆ. (ವ್ಯಾಪಾರ, ಮದುವೆ, ಗೃಹಪ್ರವೇಶ ಇತ್ಯಾದಿಗಳಿಗೆ) ಹಳ್ಳಿಗಳಲ್ಲಿ ಇವರನ್ನು ಜೋಗತಿಯರೆಂದು ಕರೆಯುತ್ತಾರೆ.

ನಾಗರಿಕ ಸಮಾಜದಲ್ಲಿ ಇವರನ್ನು ಮನುಷ್ಯರೆಂದು ಪರಿಗಣಿಸಿಯೇ ಇಲ್ಲದಿರುವುದು ನಿಜಕ್ಕೂ ದುರಂತ. ನೌಕರಿ ಪಡೆಯಬೇಕಾದರೆ ಇವರಿಗೆ ಅರ್ಜಿಯಲ್ಲಿ ಇವರಿಗೆ ಮಿಸಲಾತಿ ಸ್ಥಾನವೇ ಇಲ್ಲ. ಆದ್ದರಿಂದ ಏಪ್ರೀಲ್ 15, 2014 ಸುಪ್ರಿಂಕೋರ್ಟ್ ತೃತೀಯ ಲಿಂಗದವರಿಗೆ ಕಾನೂನು ಮಾನ್ಯತೆ ನೀಡಿದೆ. ಇವರು ಸಾಮಾಜಿಕವಾಗಿ ಮತ್ತು ಶೈಕ್ಷಣಿಕವಾಗಿ ಹಿಂದುಳಿದವರು ಎಂದು ಪರಿಗಣಿಸಿ ಶೈಕ್ಷಣಿಕ ಮತ್ತು ಸರಕಾರಿ ನೇಮಕಾತಿಯಲ್ಲಿ ಮೀಸಲಾತಿ ನೀಡುವಂತೆ ಕೇಂದ್ರ ಮತ್ತು ರಾಜ್ಯ ಸರಕಾರಗಳಿಗೆ ನಿರ್ದೇಶನ ಮಾಡಲಾಯಿತು.

**"ತೃತೀಯ ಲಿಂಗೀಯರು"**

ತೃತೀಯ ಲಿಂಗೀಯರು ಎಂದರೆ ಅತ್ತ ಪುರುಷರೂ ಅಲ್ಲದ ಇತ್ತ ಸ್ತ್ರೀಯರೂ ಅಲ್ಲದ ಮೂರನೇ ಗುಂಪಿನ ಅಥವಾ ಲಿಂಗದ ಮಂದಿ ಎಂದರ್ಥ. ಇವರುಗಳು ಜಗತ್ತಿನ ಹಲವು ದೇಶಗಳಲ್ಲಿ ಹಲವು ಹೆಸರುಗಳಿಂದ ಜೀವನ ನಡೆಸಿದ್ದಕ್ಕೆ

ಮಾಹಿತಿಯಿದೆ. ಇವರು ಸ್ತ್ರೀ ವರ್ಗಕ್ಕೆ ಇಲ್ಲವೇ ಪುರುಷ ವರ್ಗಕ್ಕೆ ಯಾವುದಕ್ಕೂ ಸೇರಿಕೊಳ್ಳದೆ. ಇರುವ ಇವರಿಗೆ ನಪುಂಸಕರೆಂದು ಕರೆಯಲಾಗುತ್ತಿದೆ.

ಇವರಿಗೆ ಬೇರೆ ಬೇರೆ ಕಡೆಗಳಲ್ಲಿ ಬೇರೆ ಹೆಸರುಗಳಿಂದ ಕರೆಯಲಾಗುತ್ತದೆ **ಹಿಜ್ರಾಗಳು,** ಕೋಠಿಗಳು, ಅರವಾನಿಗಳು, ಜೋಗಪ್ಪರು, ಶಿವಶಕ್ತಿಗಳು ಎಂದು ಕರೆಯಲಾಗುತ್ತಿದೆ. ಇಂದಿನ ಪರಿಭಾಷೆಯಲ್ಲಿ ಸ್ತ್ರೀ ಸಲಿಂಗವಾದಿಗಳು, ಪುರುಷ ಸಲಿಂಗವಾದಿಗಳು, ಉಭಯಲಿಂಗ ಕಾಮಿಗಳು, ಭಿನ್ನಲಿಂಗ ಭಾಗದವರು ಮತ್ತು ಸಲಿಂಗಕಾಮಿಗಳು ಎಂದು ಕರೆಯಲಾಗುತ್ತಿದ್ದರು ಒಟ್ಟಾರೆ ಇವರನ್ನು ತೃತೀಯ ಲಿಂಗೀಯರು ಎಂಬುದಾಗಿ ಕರೆಯಲಾಗುತ್ತಿದೆ.

**ತೃತೀಯ ಲಿಂಗಿಗಳಾಗಲು ಕಾರಣಗಳು**

ಹುಟ್ಟಿದಾಗ ಪುರುಷ ಎಂದೇ ಗುರುತಿಸಿಕೊಳ್ಳುತ್ತಾರೆ. ದೈಹಿಕ ಸ್ವರೂಪ ಕೂಡ ಹಾಗೇ ಇರುತ್ತದೆ. ಆದರೆ 12 ರಿಂದ 13 ವರ್ಷದ ನಂತರ ಭಾವನೆಗಳು ಪಲ್ಲಟಗಳಾಗಿ ಬಿಡುತ್ತದೆ. ಶಾಲೆಗಳಲ್ಲಿ ಬಾಲಕ ಸಹಪಾಠಿಯತ್ತ ಲೈಂಗಿಕ ಆಕರ್ಷಣೆಗೆ ಒಳಗಾಗಬಹುದು. ಶಾಲೆಯ ಸಮಾರಂಭಗಳಲ್ಲಿ ನಾಟಕಗಳಲ್ಲಿ ಸ್ತ್ರೀ ಪಾತ್ರವೇ ಬೇಕು ಎಂದು ಹಠ ಹಿಡಿಯುವರು.

ತನ್ನಲ್ಲೇಕೆ ಇಂಥ ಭಾವನೆಗಳು ಯಾಕೆ ಬರುತ್ತಿವೆ? ಎಂದು ಹುಡುಕ ಬಹುದು, ಉತ್ತರ ಸಿಗದೆ ತಲ್ಲಣಗೊಳ್ಳಬಹುದು. ಹದಿನೆಂಟು–ಇಪ್ಪತ್ತರ ಹೊತ್ತಿಗೆ ತಾನು ದೈಹಿಕವಾಗಿ ಪುರುಷನಾಗಿದ್ದರೂ, ಮಾನಸಿಕ ಹಾಗೂ ಭಾವನಾತ್ಮಕವಾಗಿ ಹೆಣ್ಣು ಎಂಬುದು ಖಚಿತವಾಗುತ್ತದೆ.

**ಸಾಮಾಜಿಕ ತಾರತಮ್ಯಕ್ಕೆ ಒಳಗಾದ ಸಮುದಾಯವಾಗಿ ತೃತೀಯ ಲಿಂಗೀಯರು**

ತೃತೀಯ ಲಿಂಗೀಯರ ಸಮೂಹವು ಭಾರತದಲ್ಲಿ ವಿಚಿತ್ರ ಪರಿಸ್ಥಿತಿಯಲ್ಲಿದೆ. ಈ ಸಮೂಹದ ಜನ ಸಾಮಾಜಿಕ ಅವಹೇಳನಕ್ಕೆ ಹಾಗೂ ಅಪಹಾಸ್ಯಕ್ಕೆ ಈಗಲೂ ಗುರಿಯಾಗಿರುವುದನ್ನು ದೇಶಾದ್ಯಂತ ಗಮನಿಸಬಹುದು. ಮನೆಯಲ್ಲಿ ಮಗುವಿನ ಜನನವಾದಾಗ, ಇಲ್ಲವೇ ವಿವಾಹದ ಸಂದರ್ಭದಲ್ಲಿ ಈ ಸಮೂಹಕ್ಕೆ ಸೇರಿದ ವ್ಯಕ್ತಿಗಳನ್ನು ಕರೆಯಿಸಿ ಹುಟ್ಟಿದ ಮಗುವನ್ನು ಹಾಗೂ ವಿವಾಹವಾಗಲಿರುವ ಮದುಮಗ/ಕನ್ಯೆಯನ್ನು ಹರಸುವಂತೆ ಗೌರವದಿಂದಲೇ ವಿನಂತಿಸಿಕೊಳ್ಳುತ್ತಾರೆ. ಈ ಒಂದು ಸಂದರ್ಭವನ್ನು ಬಿಟ್ಟರೆ ಈ ಸಮೂಹದ ಜನರನ್ನು ಅಪಹಾಸ್ಯ ಮಾಡುವುದು, ಹೊರಗಟ್ಟುವುದು, ಅವರಿಂದ ದೂರ ಸರಿಯುವುದು ಇವೆಲ್ಲವೂ ಇವತ್ತಿಗೂ ನಿರಂತರವಾಗಿ ನಡೆಯುತ್ತಲೇ ಬಂದಿದೆ.

**ಭಾರತೀಯ ಸಮಾಜದ ತೃತೀಯ ಲಿಂಗೀಯರು: ಕೆಲವು ಅಂಕಿ ಅಂಶಗಳು**

ತೃತೀಯ ಲಿಂಗೀ ಸಮೂಹದ ಜನರನ್ನು 2014 ರಿಂದಲೇ ತೃತೀಯ ಲಿಂಗದವರೆಂದು ಭಾರತವು ಹೇಳುತ್ತಿದ್ದರೂ ಭಾರತದ ಸುಪ್ರಿಂಕೋರ್ಟ 2014ರಲ್ಲಿ ತೃತೀಯ ಲಿಂಗೀಯರು ಎಂದು ಘೋಷಿಸಿದ ಮೇಲೆ ಅವರಿಗೆ ಒಂದು ರೀತಿಯಲ್ಲಿ ಅಧಿಕೃತ ನಾಗರಿಕತ್ವ ಪಡೆದಂತಾಯಿತು. 2011ರ ಜನಗಣತಿಯಲ್ಲಿ ತೃತೀಯ ಲಿಂಗೀಯರ ಸಂಖ್ಯೆ 4.9 ಲಕ್ಷಕ್ಕೂ ಹೆಚ್ಚು ಜನ ಇದ್ದಾರೆ ಎಂದು ತಿಳಿದುಬಂದಿತು. ಇತ್ತೀಚೆಗೆ ನಡೆದ ಚುನಾವಣೆಯಲ್ಲಿ ಮತದಾರರನ್ನಾಗಿ ನೋಂದಾಯಿಸಿ ಕೊಳ್ಳುವಾಗ 28,341 ಜನ ನೋಂದಾಯಿಸಿಕೊಂಡಿದ್ದರು ಎಂದು ತಿಳಿದುಬಂದಿದೆ.

2009ರಲ್ಲಿ ನಡೆದ ಚುನಾವಣೆ ಕಮಿಷನ್ ಇವರುಗಳಿಗೆ ಮತದಾರರ ಪಟ್ಟಿಯಲ್ಲಿ ಇವರನ್ನು ಪ್ರತ್ಯೇಕ ಅವಕಾಶ ನೀಡಿದ ನಂತರ ಅವರನ್ನು **"ಇತರರು"** ಎಂದು ನೋಂದಾಯಿಸಲಾಯಿತು. 2023 ಮೇ ತಿಂಗಳಲ್ಲಿ ಕರ್ನಾಟಕ ವಿಧಾನಸಭೆಗೆ ನಡೆಯುವ ಚುನಾವಣೆಯಲ್ಲಿ 4751 ಜನ ಮತದಾರರ ಪಟ್ಟಿಯಲ್ಲಿ ನೋಂದಾಯಿಸಿಕೊಂಡಿದ್ದಾರೆ ಕ್ರಮೇಣವಾಗಿ ಅವರಲ್ಲಿ ಜಾಗೃತಿ ಮೂಡುತ್ತಾ ಬಂದಿದೆ.

ವಿವಿಧ ರಾಜ್ಯಗಳಲ್ಲಿ ತೃತೀಯ ಲಿಂಗೀಯರ ಸಂಖ್ಯೆ ಅಧಿಕವಾಗಿದೆ ಉತ್ತರ ಪ್ರದೇಶದಲ್ಲಿ ಅವರುಗಳ ಜನಸಂಖ್ಯೆ 28.18%, ಆಂದ್ರಪ್ರದೇಶದಲ್ಲಿ 8.97%, ಬಿಹಾರ 8.37%, ಪ.ಬಂಗಾಳ 6.22% ತಮಿಳನಾಡು 4.58% ಜನಸಂಖ್ಯೆಯಿದೆ, ಒಟ್ಟಾರೆ ದೇಶದಲ್ಲಿ ತೃತೀಯ ಲಿಂಗೀಯರ ಸಂಖ್ಯೆ 2011ರ ಜನಗಣತಿಯಂತೆ 4.9ಲಕ್ಷ ಜನ ಇದ್ದಾರೆ ಎಂದು ತಿಳಿದು ಬಂದಿದೆ. ತೃತೀಯ ಲಿಂಗೀಯರ ಇಡೀ ದೇಶದ ಸಾಕ್ಷರತಾ ಪ್ರಮಾಣ 2011 ರಲ್ಲಿ 74% ಇದ್ದರೆ ತೃತೀಯ ಲಿಂಗೀಯರ ಸಾಕ್ಷರತೆ 46% ಮಾತ್ರ ಇದೆ ಏಕೆಂದರೆ ಶಾಲೆಗಳಲ್ಲಿ ತಾರತಮ್ಯಕ್ಕೆ ಬಲಿಯಾಗಿದ್ದಾರೆ.

**ತೃತೀಯ ಲಿಂಗೀಯರ ಅಂತಸ್ತು/ಸಮಸ್ಯೆಗಳು**

***ಸಾಮಾಜಿಕ ಅಂತಸ್ತು***

ಈ ಸಮೂಹದ ಜನರಿಗೆ ಎಲ್ಲಾ ರೀತಿಯಲ್ಲಿ ಸಾಮಾಜಿಕ ನಿಷೇಧಗಳು ಹೇರಲಾಗಿದೆ. ದೇವಾಲಯ, ರೆಸ್ಟೋರೆಂಟ್, ಮಾಲ್ಗಳು, ಹೋಟಲ್, ವ್ಯಾಪಾರ ಕೇಂದ್ರಗಳು ಮುಂತಾದ ಸ್ಥಳಗಳಿಗೆ ನಿಷೇಧಗಳು ಅಥವಾ ವಿರೋಧಗಳು ಕಂಡುಬರುತ್ತವೆ. ಸಾಮಾನ್ಯರಂತೆ ಇವರು ಸಾಮಾನ್ಯ ಜೀವನ ನಡೆಸುವುದು ಕಷ್ಟ ಮತ್ತು ಎಲ್ಲಾ ಬಗೆಯ ನಾಗರಿಕ ಸೌಲಭ್ಯ ಪಡೆಯುವಲ್ಲಿ ಈ ಜನಕ್ಕೆ ತಾರತಮ್ಯ ಮಾಡಲಾಗಿದೆ.

***ಆರ್ಥಿಕ ಅಂತಸ್ತು***

ಈ ಸಮೂಹದ ಜನರು ಆರ್ಥಿಕವಾಗಿ ಬಡವರು, ಹೇಳಿಕೊಳ್ಳುವ ಯಾವುದೇ ಒಂದು ಉದ್ಯೋಗಗಳಿಲ್ಲ ತಮ್ಮ ಜೀವನೋಪಾಯಕ್ಕಾಗಿ ಭಿಕ್ಷೆ ಬೇಡುವುದು, ನೃತ್ಯ ಮಾಡುವುದು, ಹಾಗೂ ಲೈಂಗಿಕ ಕೆಲಸದಲ್ಲಿ ತೊಡಗುವುದು ಇವರಿಗೆ ಅನಿವಾರ್ಯವಾಗಿದೆ. ಅಪ್ಪಿ ತಪ್ಪಿ ಉದ್ಯೋಗಕ್ಕೆ ಸೇರಿದರೆ ಅವರನ್ನು ಹೊರಹಾಕುವುದು ಮತ್ತು ಅಪಹಾಸ್ಯಕ್ಕೆ ಗುರಿಯಾಗಬೇಕಾದ ಪರಿಸ್ಥಿತಿ ಇದೆ, ತಮ್ಮ ಭೌತಿಕ ಅಸ್ತಿತ್ವಕ್ಕಾಗಿ ಪ್ರತಿದಿನವೂ ಹೋರಾಟ ಮಾಡಬೇಕಾದ ಅನಿವಾರ್ಯತೆ ಇದೆ.

***ಶೈಕ್ಷಣಿಕ ಅಂತಸ್ತು***

ಈ ಸಮೂಹದ ಜನರಿಗೆ ಔಪಚಾರಿಕ ಶಿಕ್ಷಣವೇ ಇರುವುದಿಲ್ಲ, ಶಾಲಾ ಪರಿಸರದಲ್ಲಿ ಅವರು ಒಳಗಾಗುವ ಅವಹೇಳನ, ಮಾನಸಿಕ ಹಿಂಸೆ, ಅಪಹಾಸ್ಯ, ಕಿರುಕುಳ ಮುಂತಾದವುಗಳು ಅವರಿಗೆ ಅವರ ಶಿಕ್ಷಣವನ್ನು ಮುಂದುವರಿಸಲಾಗದಂತೆ ಮಾಡಿಬಿಡುತ್ತದೆ. ಆದ್ದರಿಂದ ಇವರಲ್ಲಿ ಅರ್ಧಕ್ಕೆ ಶಿಕ್ಷಣ ಪಡೆದವರಲ್ಲಿ ಹೆಚ್ಚಿನ ಸಂಖ್ಯೆಯಲ್ಲಿ ಕಂಡುಬರುತ್ತಾರೆ. 2014ರಲ್ಲಿ ವಿಶ್ವವಿದ್ಯಾಲಯ ಧನ ಸಹಾಯ ಆಯೋಗ(ಯುಜಿಸಿ)ವು ಒಂದು ಸಮಿತಿಯನ್ನು ಹೊರಡಿಸಿ ಎಲ್ಲಾ ವಿಶ್ವ ವಿದ್ಯಾಲಯಗಳಲ್ಲಿ ತೃತೀಯ ಲಿಂಗೀಯರನ್ನು ಪ್ರವೇಶ ಪಡೆಯಬೇಕೆಂದು ತಿಳಿಸಿದೆ ಆದರೂ ಅವರ ಪ್ರವೇಶ ನಿರೀಕ್ಷಿತ ಪ್ರಮಾಣದಲ್ಲಿ ಕಂಡುಬರಲಿಲ್ಲ.

***ರಾಜಕೀಯ ಅಂತಸ್ತು***

ಭಾರತದ ಪ್ರಜೆಗಳಾಗಿರುವ ಎಲ್ಲರಿಗೂ ಮತದಾನ ಮಾಡುವ ಹಾಗೂ ಚುನಾವಣೆಗೆ ಸ್ಪರ್ಧಿಸುವ ಹಕ್ಕುಗಳಿವೆ. ಆದರೆ 2009ಕ್ಕೂ ಮೊದಲು ಸ್ತ್ರೀ ಅಥವಾ ಪುರುಷ ಎಂದು ಎರಡು ಲಿಂಗಳ ಬಗ್ಗೆ ಮಾತ್ರ ಮತದಾರರ ಪಟ್ಟಿಯಲ್ಲಿ ಪ್ರಸ್ತಾಪವಿತ್ತು, ಆದರೆ 2009ರ ನಂತರದಿಂದ ಚುನಾವಣಾ ಆಯೋಗವು ಸ್ತ್ರೀ ಪುರುಷ ಮತ್ತು ಇತರೆಯವರು ಎಂಬ ಇನ್ನೊಂದು ಕಲಂ ಸೇರಿಸಿದ್ದು ಅದರ ಉಪಯೋಗವನ್ನು ಪಡೆದುಕೊಳ್ಳಲು ಹೆಚ್ಚಿನವರು ಚುನಾವಣಾ ಕಣಕ್ಕಿಳಿದು ಜಯ ಗಳಿಸಿದ ಉದಾಹರಣೆಗಳು ಇವೆ. (ಶಬನಮ್ ಮೌಸಿ ಬಾನೊ ಎಂಬ ತೃತೀಯ ಲಿಂಗೀ ಮಧ್ಯಪ್ರದೇಶದ ಶಾಸಕರಾಗಿ ಆಯ್ಕೆಯಾಗಿದ್ದಾಳೆ)

***ಹಕ್ಕುಗಳ ರಕ್ಷಣೆ ಮಸೂದೆ (2019)***

ತೃತೀಯ ಲಿಂಗಿ ಸಮುದಾಯವು ದೇಶದ ಅತ್ಯಂತ ಕೆಳ ಅಂಚಿನಲ್ಲಿರುವ ಸಮುದಾಯವಾಗಿದೆ.

ಅವರು ಸಾಮಾಜಿಕ ಬಹಿಷ್ಕಾರದಿಂದ, ಶಿಕ್ಷಣ ಸೌಲಭ್ಯಗಳ ಕೊರತೆ, ನಿರುದ್ಯೋಗ, ವೈದ್ಯಕೀಯ ಸೌಲಭ್ಯಗಳ ಕೊರತೆ ಮುಂತಾದ ಸಮಸ್ಯೆಗಳನ್ನು ಎದರಿಸುತ್ತಿದ್ದಾರೆ. ಆದ್ದರಿಂದ ಈ ಮಸೂದೆ ಅವರನ್ನು ಸಶಕ್ತಗೊಳಿಸುವ ಸಲುವಾಗಿ ಪ್ರಧಾನ ಮಂತ್ರಿಯವರ ಅಧ್ಯಕ್ಷತೆಯಲ್ಲಿ ನಡೆದ ಕೇಂದ್ರ ಸಚಿವ ಸಂಪುಟವು ತೃತೀಯ ಲಿಂಗೀಯರ ವ್ಯಕ್ತಿಗಳ ಹಕ್ಕುಗಳ ರಕ್ಷಣೆ ಮಸೂದೆ 2019ರ ಪ್ರಸ್ತಾವನೆಯನ್ನು ಅಂಗೀಕರಿಸಿದೆ. ಮಸೂದೆ ಅವರ ಸಾಮಾಜಿಕ, ಆರ್ಥಿಕ, ಮತ್ತು ಶೈಕ್ಷಣಿಕ ಸಬಲೀಕರಣಕ್ಕೆ ಒಂದು ವ್ಯವಸ್ಥೆಯನ್ನು ಒದಗಿಸುತ್ತದೆ. ಈ ಮಸೂದೆಯು ಹೆಚ್ಚಿನ ಸಂಖ್ಯೆಯಲ್ಲಿ ತೃತೀಯ ಲಿಂಗಿ ವ್ಯಕ್ತಿಗಳಿಗೆ ಪ್ರಯೋಜನ ನೀಡುತ್ತದೆ. ಅವರ ವಿರುದ್ಧ ಕಳಂಕ, ತಾರತಮ್ಯ ಮತ್ತು ನಿಂದನೆಯನ್ನು ತೊಲಗಿಸಿ ಅವರನ್ನು ಸಮಾಜದ ಮುಖ್ಯವಾಹಿನಿಗೆ ತರುತ್ತದೆ.

***ಮೀಸಲಾತಿ:***

ಉದ್ಯೋಗ, ಶಿಕ್ಷಣದಲ್ಲಿ ಮೀಸಲಾತಿ ಪಡೆಯುವುದು ತೃತೀಯ ಲಿಂಗಿಗಳ ಮೂಲಭೂತ ಹಕ್ಕು ಎಂದು ಸುಪ್ರಿಂಕೋರ್ಟ್ ಆದೇಶದನ್ವಯ ಸರ್ಕಾರಿ ಹುದ್ದೆಗಳಲ್ಲಿ ತೃತೀಯ ಲಿಂಗಿ ಸಮುದಾಯದವರಿಗೆ 1% ಹುದ್ದೆ ಕಾಯ್ದಿರಿಸಲು ಕರ್ನಾಟಕ ನಾಗರಿಕ ಸೇವೆಗಳ ನಿಯಮಗಳಿಗೆ ತಿದ್ದುಪಡಿತಂದಿದೆ.

**ಪ್ರಮುಖ ಹುದ್ದೆಗೇರಿದ ತೃತೀಯ ಲಿಂಗೀಯರು :**

ಸಮಾಜದಲ್ಲಿನ ಅಸಮಾನತೆ, ದೌರ್ಜನ್ಯ ಮತ್ತು ಶೋಷಣೆಯನ್ನು ಮೆಟ್ಟಿ ನಿಂತು ಜಗತ್ತಿನಲ್ಲಿ ತೃತೀಯ ಲಿಂಗಿಗಳು ಸಾಧನೆ ಮಾಡುವ ಮೂಲಕ ತಮ್ಮದೆ ಆದ ವಿಶಿಷ್ಟ ಛಾಪು ಮೂಡಿಸಿದ್ದಾರೆ. ಈ ತೃತೀಯ ಲಿಂಗಿಯರ ಸಾಧನೆಗಳು ಈ ಕೆಳಗಿನಂತೆ ಇವೆ.

- ದೇಶದ ಮೊದಲ ತೃತೀಯ ಲಿಂಗಿ ಟಿವಿ ನಿರೂಪಕಿ ಪದ್ಮಿನಿ ಪ್ರಕಾಶ್ ತಮಿಳನಾಡಿನ ಕೊಯಮತ್ತೂರಿನ ವಾಹಿನಿಯಲ್ಲಿ ಸುದ್ದಿ ವಾಚಿಸಿದ್ದರು.
- ಮೇಹರ್ ಮಧು ಬಾಯ್ ಛತ್ತಿಸ್‌ಗಡದ ರಾಯ್‌ಗಾರಹ್‌ನಲ್ಲಿ ಮೇಹರ್ ಆಗಿ ಕಾರ್ಯನಿರ್ವಹಣೆ.
- ಬೀದಿ ನಾಟಕ ಮತ್ತು ಜನಪದ ನೃತ್ಯಗಾರ್ತಿ ಮಧ್ಯ ಪ್ರದೇಶದಲ್ಲಿ ಶಾಸಕಿಯಾಗಿದ್ದ ಶಾಭನಾಮ್ ಮೌಸಿ.
- ನ್ಯಾಯಾಧೀಶರಾಗಿ ಸಾಧನೆ ಮಾಡಿದ ಬೆಂಗಾಲಿಯ ಜೊಯಿತ ಮಂಡಲ್.
- ತಮಿಳನಾಡಿನ ಶರ್ಮಿಲಾ ಪೋಲಿಸ್ ಅಧಿಕಾರಿ.
- ಪ್ರೀತಿಕಾ ಯಾಸ್ಮೀನ್ ನೌಕದಳದದಲ್ಲಿ ಸೇವೆ ಸಲ್ಲಿಸುತ್ತಿದ್ದಾರೆ.
- ಕೊಲ್ಕತ್ತಾದ ಕೃಷ್ಣರಾಜ ಕಾಲೇಜಿನಲ್ಲಿ ಪ್ರಾಂಶುಪಾಲರಾದ ಮನಬಿ ಬುದ್ಯಪಧ್ಯಾಯ್.
- ಕರ್ನಾಟಕದ ಜಾನಪದ ನೃತ್ಯ, ರಂಗಭೂಮಿ ನಟಿ, ಗಾಯಕಿ ಮತ್ತು ನರ್ತಕಿ ಮಂಜಮ್ಮಜೋಗತಿ ಪದ್ಮಶ್ರೀ ಪ್ರಶಸ್ತಿ ಪುರಷ್ಕೃತರು (2021)
- ಕರ್ನಾಟಕ ರಾಜ್ಯದ ರಾಯಚೂರು ಜಿಲ್ಲೆಯ ಮಾನ್ವಿ ತಾಲೂಕಿನ ತೃತೀಯ ಲಿಂಗಿ ಮೀಸಲಾತಿ ಸದ್ಬಳಕೆ ಮಾಡಿಕೊಂಡ ಪೂಜಾ ಪ್ರಾಥಮಿಕ ಶಾಲಾ ಶಿಕ್ಷಕರ ನೇಮಕಾತಿಯಲ್ಲಿ ಆಯ್ಕೆಯಾಗಿದ್ದಾರೆ.

**ಮೈತ್ರಿ ಯೋಜನೆ**

ಲಿಂಗತ್ವ ಅಲ್ಪಸಂಖ್ಯಾತ ಸಮುದಾಯಕ್ಕೆ, (ಕೋಥಿ, ಮಂಗಳಮುಖಿ, ಜೋಗಪ್ಪಂದಿರು, ಹಿಜರಾ, ಎಫ್,ಟು,ಎಂ) ತಿಂಗಳೊಂದರ 500 ರೂ ಮಾಸಿಕ ಮಾಸಾಶನ ನೀಡುವ ಯೋಜನೆ ಮೈತ್ರಿ ಯೋಜನೆ ಆಗಿದೆ. ಈಗಾಗಲೇ ರಾಜ್ಯದಲ್ಲಿ 5000 ಲಿಂಗತ್ವ ಅಲ್ಪಸಂಖ್ಯಾತರು ಮೈತ್ರಿ ಯೋಜನೆಯ ಫಲಾನುಭವಿಗಳಾಗಿದ್ದಾರೆ.

**ತೃತೀಯ ಲಿಂಗೀಯರ ಹಕ್ಕುಗಳು**

1. ಸಮಾಜದಲ್ಲಿ ಗಂಡು–ಹೆಣ್ಣು ಇರುವಂತೆ ತೃತೀಯ ಲಿಂಗಿಯರದ್ದೂ ಒಂದು ವರ್ಗ, ನಮಗೂ ಸಮಾಜದ ಮುಖ್ಯವಾಹಿನಿಯಲ್ಲಿ ಬದುಕಲು ಅವಕಾಶ ಮಾಡಿಕೊಡಬೇಕು.
2. ನಾಗರಿಕ ಸಮಾಜದಲ್ಲಿ ಬದುಕುತ್ತಿದ್ದರೂ ಬಹುತೇಕ ತೃತೀಯ ಲಿಂಗಿಗಳಿಗೆ ವೋಟ್ ಹಾಕುವ ಹಕ್ಕಿಲ್ಲ ನಾಗರಿಕ ಸೌಲಭ್ಯವನ್ನು ಕಲ್ಪಸಿಬೇಕು.
3. ಪಡಿತರ ಚೀಟಿ ಸೌಲಭ್ಯ ನೀಡಬೇಕು.
4. ಶತಮಾನಗಳಿಂದ ಈ ನಾಗರಿಕ ಸಮಾಜದಲ್ಲಿ ಸಾಕಷ್ಟು ಅವಮಾನ, ಲೈಂಗಿಕ ದೌರ್ಜನ್ಯ, ಕಿರುಕುಳಕ್ಕೊಳಗಾಗುತ್ತಿದ್ದು, ಅವರಿಗೆ ಸೂಕ್ತ ರಕ್ಷಣೆ ಮತ್ತು ನಾಗರಿಕ ಸೌಲಭ್ಯವನ್ನು ಒದಗಿಸಬೇಕು.

**ಉಪಸಂಹಾರ**

ತೃತೀಯ ಲಿಂಗೀಯರು ಪ್ರಾಚೀನ ಕಾಲದಿಂದ ಹಿಡಿದು ಇಲ್ಲಿಯ ತನಕ ಅವರನ್ನು ಅವಮಾನಿಸಿದೆ, ಸಮಾಜ ನಿರ್ಲಕ್ಷಿಸಿದೆ, ಕುಟುಂಬದಲ್ಲಿ ಅವರನ್ನು ದೂರ ಮಾಡಿದೆ, ಅವರನ್ನು ಪ್ರೀತಿಸುವುದು ತಿಳುವಳಿಕೆ ನೀಡುವುದಾಗಿದೆ. ತೃತೀಯ ಲಿಂಗೀಯರು ಎಲ್ಲಾ ಪ್ರಜೆಗಳಂತೆ ಈ ದೇಶದ ಸರ್ವ ಸ್ವತಂತ್ರ ಪ್ರಜೆಗಳಾಗಿದ್ದಾರೆ ಮತ್ತು ಎಲ್ಲಾ ಹಕ್ಕುಗಳನ್ನು ಹೊಂದಿದವರು. ಒಟ್ಟಾರೆ ಅವರನ್ನು ಕುರಿತು ವಿಸ್ತೃತ ಅಧ್ಯಯನ ಮಾಡಬೇಕಾಗಿದೆ. ಭಾರತ ಸರಕಾರ ಇವರ ಬಗ್ಗೆ ಕಾಳಜಿ ವಹಿಸಬೇಕಾಗಿದೆ. ಎಲ್ಲರಂತೆ ಬದುಕಲು ಅವಕಾಶ ಮಾಡಿಕೊಡಬೇಕಾಗಿದೆ.

**ಪರಾಮರ್ಶನ ಗ್ರಂಥಗಳು :**


- ಗುರುಲಿಂಗಯ್ಯ, ಎಂ. (2016). *ಅಂಚಿನ ಗುಂಪುಗಳ ಸಮಾಜಶಾಸ್ತ್ರ.* ದೀವಿತ್ ಪ್ರಕಾಶನ
- ಪ್ರಜಾವಾಣಿ ದಿನಪತ್ರಿಕೆ. (2015, ಸೆಪ್ಟೆಂಬರ್ 13). *ಮಂಗಳಮುಖಿಯರ ಅಭಿವೃದ್ಧಿಗೆ ಪ್ರತ್ಯೇಕ ಆಯೋಗ.*
- ರೇವತಿ, ಎ. (2011). *ಬದುಕು ಬಯಲ ಹಿಜರಾ ಒಬ್ಬಳ ಆತ್ಮಕಥೆ.* ಲಂಕೇಶ ಪ್ರಕಾಶನ
- ಶಂಕರರಾವ್,ಚ.ನ. (2024). *ಅಂಚೀಕರಣಗೊಂಡ ಸಮೂಹಗಳ ಸಮಾಜಶಾಸ್ತ್ರ.* ಜೈ ಭಾರತ ಪ್ರಕಾಶನ.
- ಶಂಕರರಾವ್,ಚ.ನ. (2023). *ಭಾರತೀಯ ಸಮಾಜ ನಿರಂತರತೆ ಮತ್ತು ಪರಿವರ್ತನೆ.* ಜೈ ಭಾರತ ಪ್ರಕಾಶನ.